**ದಿನಾಂಕಃ 18-07-2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ಎದುರುದಾರರ ಪರ ಶ್ರೀ. ಎಸ್.ಎಸ್.ಡಿ. ವಕೀಲರಿಂದಃ-**

ನಾನು ಎಲ್.ಎಲ್.ಬಿ. ಯನ್ನು 2025 ರಲ್ಲಿ ಪೂರ್ಣಗೊಳಿಸಿರುತ್ತೇನೆ. ನಾನು ವಕೀಲೆಯಾಗಿ ನೊಂದಣಿಗೊಂಡಿರುತ್ತೇನೆಂದರೆ ಸರಿ. ನಾನು ಬಹಳಷ್ಟು ಕೇಸುಗಳನ್ನು ವಕಾಲತ್ ಹಾಕಿರುತ್ತೇನೆಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನು ಬಾರ್ ಪರೀಕ್ಷೆಯನ್ನು ಇನ್ನೂ ಪೂರ್ಣಗೊಳಿಸಿಲ್ಲ ಎಂದು ನುಡಿದಿರುತ್ತಾರೆ. ನಮ್ಮ ತಂದೆ-ತಾಯಿಗೆ 3 ಜನ ಮಕ್ಕಳು. ಇಬ್ಬರು ಅಣ್ಣಂದಿರು, ನಾನು ಒಬ್ಬಳು. ನಾನು ಪ್ರತ್ಯೇಕವಾಗಿ ವಾಸವಾಗಿರುತ್ತೇನೆ. ಗುಮ್ಮಸಂದ್ರ ಗ್ರಾಮದಲ್ಲಿ ನನ್ನ ತಂದೆಯ ಮನೆಯ ಪಕ್ಕದಲ್ಲಿ ಒಂದು ಮನೆ ಬಾಡಿಗೆ ಪಡೆದುಕೊಂಡು ಅದರಲ್ಲಿ ವಾಸವಾಗಿರುತ್ತೇನೆ. ಸದರಿ ಮನೆಗೆ ಮುಂಗಡವಾಗಿ 30 ಸಾವಿರ ನೀಡಿದ್ದು, 5 ಸಾವಿರ ರೂಪಾಯಿ ಪ್ರತಿತಿಂಗಳ ಬಾಡಿಗೆ ನೀಡುತ್ತಿದ್ದೇನೆ. ನನಗೆ ಮತ್ತು ಮನೆ ಮಾಲೀಕರಿಗೆ ಯಾವುದೇ ಲಿಖಿತ ಬಾಡಿಗೆ ಕರಾರು ಆಗಿರುವುದಿಲ್ಲ, ಆದರೆ ಮೌಖಿಕವಾಗಿ ಆಗಿರುತ್ತದೆ. ಮನೆ ಮಾಲೀಕರೊಂದಿಗೆ ಕರಾರು ಮಾಡಿಕೊಳ್ಳಬೇಕು ಎಂಬ ವಿಚಾರ ನನಗೆ ಗೊತ್ತಿರುತ್ತದೆ. ನಾನು ಆ ರೀತಿ ಯಾವುದೇ ಬಾಡಿಗೆ ಮನೆಯಲ್ಲಿ ವಾಸವಾಗಿಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆ ಕಾರಣದಿಂದ ನಾನು ಯಾವುದೇ ಬಾಡಿಗೆ ಕರಾರುಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಬಾಡಿಗೆಯನ್ನು ಮಾಲೀಕರಿಗೆ ನಗದಾಗಿ ಪಾವತಿ ಮಾಡುತ್ತಿದ್ದೇನೆ.

ನಾನು ಮದುವೆಯಾದ ನಂತರ ಎದುರುದಾರರೊಂದಿಗೆ ಒಂದು ವರ್ಷ ಆತನೊಂದಿಗೆ ಇದ್ದೆ. ಎದುರುದಾರರು ಮದುವೆಯಾದ ನಂತರ ವರದಕ್ಷಿಣೆಗೆ ಒತ್ತಾಯ ಮಾಡಿರುತ್ತಾರೆ. ಮದುವೆಯ ಸಮಯದಲ್ಲಿ ವರದಕ್ಷಿಣೆಯ ಮಾತುಕತೆಯಾಗಿದ್ದು, 300 ಗ್ರಾಂ ಚಿನ್ನ ಹಾಗೂ 2 ಲಕ್ಷ ಹಣವನ್ನು ವರದಕ್ಷಿಣೆಯಾಗಿ ಎದುರುದಾರರಿಗೆ ನೀಡಿದ್ದೇವು. ಸದರಿ ಚಿನ್ನ ಮತ್ತು ಹಣವನ್ನು ಮದುವೆ ದಿನವೇ ನೀಡಿರುತ್ತೇವೆ. ಸಾಮಾನ್ಯವಾಗಿ ಯಾವುದೇ ವರಪಚೋರವನ್ನು ಕೊಡಬೇಕಾದರೆ

ತಟ್ಟೆಯಲ್ಲಿಟ್ಟು ಕೊಡುತ್ತಾರೆಂದರೆ ಸರಿ, ಸಾಕ್ಷಿ ಮುಂದುವರೆದು ನಾವು ಕೂಡ ಹಣವನ್ನು ತಟ್ಟೆಯಲ್ಲಿಟ್ಟು ಕೊಟ್ಟಿರುತ್ತೇವೆ ಹಾಗೂ ಚಿನ್ನವನ್ನು ಮದುವೆಯಲ್ಲಿ ಹಾಕಿರುತ್ತೇವೆ ಎಂದು ನುಡಿದಿರುತ್ತಾರೆ. ನಮ್ಮ ಮದುವೆಯ ವಿಡಿಯೋಗ್ರಪಿ ಮತ್ತು ಪೋಟೋ ಆಗಿರುತ್ತದೆ. ಆರತಕ್ಷತೆಯ ಅರ್ಧ ಗಂಟೆ ಮುಂಚೆ ಎದುರುದಾರರಿಗೆ ರೂಮಿನಲ್ಲಿ ಹಣವನ್ನು ಕೊಟ್ಟಿರುತ್ತಾರೆ. ಆ ರೀತಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ಯಾವುದೇ ಹಣ ಒಡವೆಯನ್ನು ಎದುರುದಾರರಿಗೆ ನೀಡಿಲ್ಲದಿದ್ದ ಕಾರಣದಿಂದ ನನ್ನ ಮದುವೆಯ ವಿಡಿಯೋ ಮತ್ತು ಛಾಯಚಿತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ನಾನು ನ್ಯಾಯಾಲಯಕ್ಕೆ ವಿಡಿಯೋ ಮತ್ತು ಪೋಟೋವನ್ನು ಹಾಜರು ಪಡಿಸುತ್ತೇನೆಂದು ನುಡಿದಿರುತ್ತಾರೆ.

ಈ ಮೇಲೆ ಹೇಳಿದ 300 ಗ್ರಾಂ ಚಿನ್ನದ ಆಭರಣಗಳು ಎಂದರೆ ಒಂದು ಲಾಂಗ್ ಚೈನ್, ಒಂದು ನೆಕ್ಲೇಸ್, ಒಂದು ಮಾಂಗಲ್ಯ ಚೈನ್, ನಾಲ್ಕು ಬಳೆಗಳು, ನಾಲ್ಕು ಉಂಗುರಗಳು, ಮೂರು ಜೊತೆ ಓಲೆ, ಒಂದು ಕೈ ಚೈನು, ಒಂದು ಕತ್ತಿನ ಚೈನ್, ನಾಲ್ಕು ಉಂಗುರಗಳು ಆಗಿರುತ್ತವೆ. ಇವುಗಳಲ್ಲಿ ಎದುರುದಾರರಿಗೆ ಕೈ ಚೈನು, ಕೊರಳ ಚೈನು, ನಾಲ್ಕು ಉಂಗುರಗಳು ನೀಡಿರುತ್ತೇವೆ. ನಾನು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ಈ ಬಗ್ಗೆ ನಾನು ನನ್ನ ಅರ್ಜಿಯಲ್ಲಿಯಾಗಲೀ ಅಥವಾ ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಾವು ಆ ರೀತಿ ಚಿನ್ನ ಮತ್ತು ಹಣವನ್ನು ಕೊಡದೇ ಇರುವ ಕಾರಣದಿಂದ ನನ್ನ ಅರ್ಜಿಯಲ್ಲಿಯಾಗಲೀ ಅಥವಾ ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

ಎದುರುದಾರರು ಮೊದಲಿನಿಂದ ಕೊನೆಯವರೆವಿಗೂ 5 ಎಕರೆ ಮಾವಿನ ತೋಟ ಜಮೀನು ಮತ್ತು ಹತ್ತು ಲಕ್ಷ ಹಣ ಕೊಡುವಂತೆ ಒತ್ತಾಯ ಮಾಡಿರುತ್ತಾರೆ. ಅಲ್ಲಿಂದ ಇಲ್ಲಿಯವರೆವಿಗೂ ಕೂಡ ಎದುರುದಾರರ ವಿರುದ್ಧ ನಾನು ಕಿರುಕುಳದ ಕೇಸನ್ನು ನೀಡಿಲ್ಲ ಎಂದರೆ ಸಾಕ್ಷಿಯು ಎದುರುದಾರರ ತಂದೆ ತಾಯಿ ಎದುರುದಾರನಿಗೆ ಬುದ್ದಿ ಹೇಳುತ್ತೇವೆ ಯಾವುದೇ ಪ್ರಕರಣ ದಾಖಲಿಸಬೇಡಿ ಎಂದು ಹೇಳಿದ ಕಾರಣ ನಾನು ದಾಖಲಿಸಿಲ್ಲ ಎಂದು ನುಡಿದಿರುತ್ತಾರೆ. ಎದುರುದಾರರ ತಾಯಿ ಹಾಗೂ ನನ್ನ ನಡುವೆ ಮಾತುಕತೆ ಕೊನೆಯ ಬಾರಿ ಮಾರ್ಚ್-2012

ಆಗಿರುತ್ತದೆ. ನಾನು ಎದುರುದಾರರ ಮನೆಗೆ ಹೋದಾಗ ಎದುರುದಾರರ ತಂದೆ ಜೀವಂತವಾಗಿದ್ದರು. 2012 ರ ನಂತರ ನಿಮಗೆ ಎದುರುದಾರರ ವಿರುದ್ಧ ದೂರು ನೀಡಲು ತೊಂದರೆ ಇತ್ತಾ ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಪಂಚಾಯಿತಿ ಮಾಡಿದ್ದ ಕಾರಣದಿಂದ ನಾನು ದೂರು ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಪಂಚಾಯಿತಿ ಮಾರ್ಚ್-2012 ರಲ್ಲಿ ನಡೆದಿರುತ್ತದೆ. ಆ ನಂತರ ದೂರು ಕೊಡಲು ನಿಮಗೆ ಏನು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಎದುರುದಾರರು ಬರುತ್ತೇನೆ, ನನ್ನನ್ನು ಕರೆದುಕೊಂಡು ಹೋಗುತ್ತೇನೆಂದು ಹೇಳಿದ್ದರಿಂದ ನಾನು ದೂರು ನೀಡಿರುವುದಿಲ್ಲ. ನಂತರ ಎದುರುದಾರರು ಬಂದು ನಂತರ ನನ್ನನ್ನು ಯಾವತ್ತೂ ಕರೆದಿರುವುದಿಲ್ಲ.

**ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಅದರಂತೆ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು )

ಓ. ಹೇ. ಕೇ. ಸ. ಎಂ. ಒ. ನನ್ನ ಸಮಕ್ಷಮ,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಮಾಗಡಿ.